**ಓಎಸ್ ನಂಃ 183/2018 ಡಿ.ಡಬ್ಲ್ಯೂ- 1**

**ದಿನಾಂಕಃ 15.12.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಪಾಟೀಸವಾಲುಃ ವಾದಿಯ ಪರ ಶ್ರೀ ಎಸ್.ಎಸ್.ಜೆ. ವಕೀಲರಿಂದಃ

ನೀವು ಏನು ಕೆಲಸ ಮಾಡುತ್ತೀರಾ ಎಂದರೆ ವ್ಯಾಪಾರ. ನಿಮಗೆ ಇಂಗ್ಲೀಷ್ ಮತ್ತು ಕನ್ನಡ ಓದಲು ಮತ್ತು ಬರೆಯಲು ಬರುತ್ತದಾ ಎಂದರೆ ಬರುತ್ತದೆ ಎನ್ನುತ್ತಾರೆ. ನಂಜಮ್ಮ ಎಂಬುವವರಿಂದ ಯಾವ ಆಸ್ತಿಯನ್ನು ಖರೀದಿ ಮಾಡುತ್ತೀರಾ ಮತ್ತು ಯಾವ ಸ.ನಂ. ಎಂದರೆ ಸ.ನಂ. 1/1 ವಿಸ್ತೀರ್ಣ 2 ಎಕರೆ 17 ಗುಂಟೆ ಜಮೀನು ಎನ್ನುತ್ತಾರೆ. ಸದರಿ ಆಸ್ತಿ ಕಸಬಾ ಹೋಬಳಿ, ಚಿಂತಾಮಣಿ ತಾಲೂಕಿಗೆ ಸೇರಿರುತ್ತದೆ. ಸೊಣ್ಣಶೇಟ್ಟಿಹಳ್ಳಿ ಗ್ರಾಮಕ್ಕೆ ಸೇರಿದ್ದು ಎನ್ನುತ್ತಾರೆ. ಸದರಿ ನಂಜಮ್ಮ ಕೊಂ. ಬಸಪ್ಪರಾಧ್ಯ ರವರಿಂದ ಸದರಿ ಸ.ನಂ. 1/1 ಆಸ್ತಿ ಬಿಟ್ಟು ಬೇರೆ ಆಸ್ತಿ ಖರೀದಿ ಮಾಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಸ.ನಂ. 1/2 ಕ್ಕೆ ನಿಮ್ಮಗೂ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸ.ನಂ.1/1 ರ ಚಕ್ಕುಬಂದಿಯನ್ನು ಸ.ನಂ.1/2 ಕ್ಕೆ ಹಾಕಿಕೊಂಡಿರುತ್ತಾರೆ ಎನ್ನುತ್ತಾರೆ. ಸ.ನಂ. 1/1 ಮತ್ತು ಸ.ನಂ. 1/2 ರ ಚಕ್ಕುಬಂದಿ ಹೇಳಲು ಬರುತ್ತದಾ ಎಂದರೆ ಸ.ನಂ. 1/1 ರ ಚಕ್ಕುಬಂದಿ ಪೂರ್ವಕ್ಕೆ ಸ್ಕೂಲ್ ಜಾವಾ ನಂಜಪ್ಪ ಮತ್ತು ಸ.ನಂ. 1/2 ಎ, ಪಶ್ಚಿಮಕ್ಕೆ ಇಬ್ರಾಹಿಂ ಸಾಬ್ ಮತ್ತು ವೆಂಕಟಶಿವಾರೆಡ್ಡಿ ಮನೆ ಮತ್ತು ಸ.ನಂ.2. ಉತ್ತರಕ್ಕೆ ಸೊಣ್ಣಶೆಟಿಟಹಳ್ಳಿ ಗ್ರಾಮನೆತ್ತಿ, ದಕ್ಷಿಣಕ್ಕೆ ರಾಜಕಾಲುವೆ ಸ.ನಂ. 57 ಎನ್ನುತ್ತಾರೆ. ಸ.ನಂ. 1/2 ಚಕ್ಕುಬಂದಿ ನನಗೆ ಗೊತ್ತಿಲ್ಲ. ನಿಡಿ 7 ಕ್ಕೆ ಚಕ್ಕುಬಂದಿ ಹಾಕಿರುತ್ತೀರಾ ಸದರಿ ಚಕ್ಕುಬಂದಿಯನ್ನು ಯಾವ ದಾಖಲಾತಿಯನ್ನು ನೋಡಿ ಹಾಕಿರುತ್ತೀರಾ ಎಂದರೆ ಸರ್ವೆ ಸ್ಕೆಚ್ ಕಾಪಿಗಳು ಎನ್ನುತ್ತಾರೆ. ಸದರಿ ಸರ್ವೆ ಸ್ಕೆಚ್ ಅನ್ನು

ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಸರ್ವೆ ಸ್ಕೆಚ್ ನಿಮ್ಮ ಹತ್ತಿರ ಇರುತ್ತದೆಯಾ ಎಂದರೆ ಇದೆ ಎನ್ನುತ್ತಾರೆ. ನಿಪಿ **6** ಸರ್ವೆ ಸ್ಕೆಚ್ ನ ಒಂದು ಭಾಗ. ಸರ್ವೆ ಸ್ಕೆಚ್ ಚಕ್ಕುಬಂದಿ ನಮೂದು ಆಗಿರುವುದಿಲ್ಲ ಎಂದರೆ ಆಗಿರುತ್ತದೆ ಎನ್ನುತ್ತಾರೆ. ಸ.ನಂ.**1** ಒಟ್ಟು **4** ಎಕರೆ **20** ಗುಂಟೆ ಮೈಸೂರು ಸರ್ವೆ ಪ್ರಕಾರ ಸ.ನಂ. **1/1** **2** ಎಕರೆ **10** ಗುಂಟೆ ಸ.ನಂ. **1/2** **2** ಎಕರೆ **10** ಗುಂಟೆ ಆಗಿ ವಿಭಾಗ ಆಗಿರುತ್ತದೆ ಎಂರದರೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ನಂಜಮ್ಮ ರವರಿಂದ ಆಸ್ತಿ ಖರಿದಿ ಮಾಡಿರುತ್ತೀರಿ ಸದರಿ ನಂಜಮ್ಮ ರವರಿಗೆ ಸ.ನಂ. **1/1** ಹೇಗೆ ಬಂತು ಎಂದರೆ ಅವರ ಗಂಡ ಬಸಪ್ಪರಾಧ್ಯ ಎಂಬುವವರಿಗೆ ಮಂಜೂರಾದ ಆಸ್ತಿ ಸದರಿ ಆಸ್ತಿ ಉಚ್ಚ ನ್ಯಾಯಾಲಯ ಸ್ವಂತ ಆಸ್ತಿ ಎಂದು ಆಗಿದ್ದು ನಂತರ ನಾನು ಖರೀದಿ ಮಾಡಿರುತ್ತೇನೆ. ಸದರಿ ಆಸ್ತಿ ಆರ್.ಎಸ್.ಎ. **2480/2009** ರಲ್ಲಿ ಇತ್ಯರ್ಥ ಆಗಿರುತ್ತದೆ. ಸದರಿ ತೀರ್ಪು ಮತ್ತು ಆದೇಶವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಆದೇಶ ಪ್ರತಿಯನ್ನು ಕೊಡಲು ತೊಂದರೆ ಇದೆಯಾ ಎಂದರೆ ಕೊಡಬಹುದು ಎನ್ನುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ಆರ್.ಎಸ್.ಎ. ಬಗ್ಗೆ ನಮೂದು ಇರುತ್ತದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಪ್ಯಾರಾ ನಂ.**8** ಸರಿ ಇರುತ್ತದೆಯಾ ಅಥವಾ ಮುಂಚೆ ಹೇಳಿರುವುದು ಸರಿ ಇರುತ್ತದೆಯಾ ಎಂದರೆ ಎರಡೂ ಸರಿ ಇರುತ್ತದೆ ಎನ್ನುತ್ತಾರೆ. ಸಾಕ್ಷಿ ಒಂದು ದಾಖಲಾತಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿಪಿ **40** ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ನಿಪಿ **40** ರಲ್ಲಿ ಸರ್ವೆನಂ. **1/1** ರ ಚಕ್ಕುಬಂದಿ ನಮೂದು ಆಗಿಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ.

ವಾದಿ ಮತ್ತು ಅವರ ತಂದೆಯವರು ಅಸಲು ದಾವಾ ಸಂ. **196/1996** ದಾವೆಯೂ ಡಿಕ್ಲೆರೇಷನ್ ದಾವೆಯನ್ನು ಹೂಡಿದ್ದು ಸದರಿ ದಾವೆಯಲ್ಲಿ ನಮೂದು ಮಾಡಿರುವ ಚಕ್ಕುಬಂದಿಯನ್ನು ನಿಪಿ 7 ರಲ್ಲಿ ನಮೂದು ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸ.ನಂ. **1/1** ರ ಚಕ್ಕುಬಂದಿ ಎನ್ನುತ್ತಾರೆ. ಅಸಲು ದಾವಾ ಸಂ.**196/1996** ರ ಚಕ್ಕುಬಂದಿಯನ್ನೇ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥ ಆಗಿರುತ್ತದೆ ಅದನ್ನೆ ಹಾಕಿರುತ್ತೀರಿ ಎಂದರೆ ಇಲ್ಲ ಎನ್ನುತ್ತಾರೆ. ಉಚ್ಚ ನ್ಯಾಯಾಲಯದಲ್ಲಿ ಆದೇಶ ಆದ ಕಾರಣಕ್ಕೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿರುತ್ತೀರಿ ಎಂದರೆ ಸಾಕ್ಷಿ ಲಿಬರ್ಟಿ ಕೋಟ್ಟಿರುವ ವಿಚಾರ ನಮಗೆ ಗೊತ್ತಿಲ್ಲ. ಸದರಿ ನಂಜಮ್ಮ ಅಸಲು ದಾವೆ ಸಂ.**47/2016** ದಾವೆ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಇದೆ ಎನ್ನುತ್ತಾರೆ. ನೀವು ನಂಜಮ್ಮರವರಿಂದ ಸದರಿ ಸರ್ವೆ ನಂ. **1/1** ಆಸ್ತಿಯನ್ನು ಖರೀದಿ ಮಾಡುವಾಗ ಅವರಿಗೆ **80** ವರ್ಷ ಅಗಿರುತ್ತದೆ ಅವರನ್ನು ಯಾಮಾರಿಸಿ ಪಿಂಚಣಿ ಕೊಡಿಸುತ್ತೇವೆ ಎಂದು ಕರೆದುಕೊಂಡು ಹೋಗಿ ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತೀರಿ ಎಂದು ಅಸಲು ದಾವಾ ಸಂ **74/2018** ಎಂದು ದಾವೆ ಇರುತ್ತದೆ ಎಂದರೆ ಸುಳ್ಳು ಎನ್ನುತ್ತಾರೆ ಸಾಕ್ಷಿ ಮಂದಮರೆದು ದಾವೆ ಇರುತ್ತದೆ ಎನ್ನುತ್ತಾರೆ. ಬೋಗಸ್ ಖರೀದಿ ಮಾಡಿರುತ್ತೀರಾ ಎಂದು ಕ್ರಿಮಿನಲ್ ಪ್ರಕರಣ ದಾಖಲು ಆಗಿರುತ್ತದೆ ಎಂದರೆ ಎಲ್ಲ ಇತ್ಯರ್ಥ ಆಗಿರುತ್ತದೆ ಎನ್ನುತ್ತಾರೆ. ಅಸಲು ದಾವಾ ಸನ **196/1996** ಆರ್ ಎಸ್ ಎ ನಂ. **451/2000** ಅಸಲು ದಾವಾ ಸಂ. **47/2016** ಅಸಲು ದಾವಾ ಸಂ. **74/2018** ಎಲ್ಲಾ ದಾವೆಸುನ್ನು ಸ.ನಂ. **1/1** ಕ್ಕೆ ಸಂಬಂಧಿಸಿದಂತೆ ಇರುತ್ತದೆ ಸ.ನಂ. **1/2** ಕ್ಕೆ ಅಲ್ಲ ಎಂದರೆ ಹೌದು ಎನ್ನುತ್ತಾರೆ. ವಾದಿ ಪ್ರಸುತ್ತ ದಾವೆಯನ್ನು ಸ.ನಂ. **1/2** ಕ್ಕೆ ಹಾಕಿರುತ್ತಾರೆ ಸ.ನಂ. **1/1** ಕ್ಕೆ ಅಲ್ಲ ಎಂದರೆ ಹೌದು. ನಿಪಿ 3 ವಾದಿಯವರ ತಾತ ಖರೀದಿ ಮಾಡಿದ ಆಸ್ತಿ ಎಂದರೆ ಗೊತ್ತಿಲ್ಲ

ಎನ್ನುತ್ತಾರೆ. ನಿಪಿ **3** ರಲ್ಲಿರುವ ಚಕ್ಕುಬಂದಿ ಯನ್ನು ನೋಡಿ ನಿಮ್ಮ ಕ್ರಯ ಪತ್ರದಲ್ಲಿ ಸದರಿ ಚಕ್ಕುಬಂದಿಯನ್ನು ನಮೂದು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. **1975** ಆದ ನಂತರ **2011** ರವರಗೊ ಸದರಿ ನಂಜಮ್ಮ ಸ.ನಂ. **1/1** ಯಾರಿಗೂ ಕ್ರಯ ಮಾಡಿ ಕೊಟ್ಟಿಲ್ಲ ಎಂದರೆ ಹೌದು ಎನ್ನುತ್ತಾರೆ ಸ.ನಂ. **1/1** ಖರಿದಿ ಮಾಡುವಾಗ ಯಾವ ದಾಖಲಾತಿಯನ್ನು ನೋಡಿರುತ್ತೀರಿ ಎಂದರೆ ಖಾತೆ ಪಹಣಿ, ನ್ಯಾಯಾಲಯದ ಆದೇಶಗಳು, ಮುಟೇಶನ್ ಎನ್ನುತ್ತಾರೆ. ಖಾತೆ ಪಹಣಿಗಳನ್ನು ನಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಮಾಡಿಲ್ಲ ಎನ್ನುತ್ತಾರೆ. ಸದರಿ ದಾಖಲಾತಿಗಳನ್ನು ಸನಂ. **1/1** ಕ್ಕೆ ಸಂಬಂಧಿದಂತೆ ಅದಕ್ಕೆ ಹಾಜರು ಮಾಡಿಲ್ಲ ಎಂದರೆ ಮಾಡಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾಖಲಾತಿಗಳು ಸಂ.ನಂ. **1/2** ಕ್ಕೆ ಸಂಬಂದಿಸಿದ್ದಲ್ಲ ಎನ್ನುತ್ತಾರೆ. ದಿಃ **13.04.1938** ಬಾಲಪ್ಪನಿಂದ ಬಸವೇಶ್ವರ ಸ್ವಾಮಿ ದೇವರಿಗೆ ಕ್ರಯ ಆಗಿರತಕ್ಕಂತ ಆಸ್ತಿ ಸನಂ. ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ **6** ಆದೇಶ ಪ್ರಕಾರ ಸ.ನಂ. **1/1** ಮತ್ತು ಸ.ನಂ. **1/2** ಸ್ಕೆಚ್ ತಯಾರು ಮಾಡಬೇಕಾದರೆ ತಪ್ಪು ಇರುತ್ತದೆ ಎಂದರೆ ಸುಳ್ಳು ಎನ್ನುತ್ತಾರೆ. **13.04.1938** ರಲ್ಲಿ ದಾನಪ್ಪರಾಧ್ಯ ಬಸಪ್ಪರಾಧ್ಯ ಸ.ನಂ. **1/2** ಕ್ರಯ ಪತ್ರದಲ್ಲಿ ನಮೂದಾಗಿರುವ ಚಕ್ಕುಬಂದಿ ಮತ್ತು ನಿಮ್ಮ ಕ್ರಯದಲ್ಲಿ ನಮೂದು ಆಗಿರುವ ಚಕ್ಕುಬಂದಿ ಒಂದಕ್ಕೊಂದು ಸರಿ ಇರುತ್ತದೆ ಸ.ನಂ. **1/2** ವಾದಿಯದ್ದು ಸೇರಿದ್ದು ಅದಕಜ್ಕೂ ನಿಮಗೂ ಸಂಬಂದ ಇಲ್ಲ ಎಂದರೆ ಸಾಕ್ಷಿ ಸ.ನಂ. **1/2** ನಮಗೆ ಸಂಬಂಧ ಇಲ್ಲ ಎನ್ನುತ್ತಾರೆ. ಚಕ್ಕುಬಂದಿ ಮಾತ್ರ ನಮಗೆ ಸಂಬಂಧ ಇರುತ್ತದೆ ಎನ್ನುತ್ತಾರೆ. ನಿಪಿ **40** ಬೋಗಸ್ ದಾಖಲಾತಿ ಎಂದರೆ ಸರಿಯಲ್ಲ. ಸದರಿ ದಾಖಲಾತಿ ಬೋಗಸ್ ಆಗಿರುತ್ತದೆ

ಅದು ಎಲ್ಲೂ ಸಿಗುವುದಿಲ್ಲ ಆದ್ದರಿಂದ ನಿಮಗೆ ಕೊಡಲು ಆಗುವುದಿಲ್ಲ ಎಂದರೆ ಸರಿಯಲ್ಲ. **2011** ರಲ್ಲಿ ಖರೀದಿ ಮಾಡಿರುತ್ತೀರಿ ಅದ್ದರಿಂದ **2016** ರವರೆಗೂ ಸ್ವಾಧಿನ ಪಡೆದುಕೊಂಡಿರುವುದಿಲ್ಲ ಎಂದರೆ ಸುಳ್ಳು ಎನ್ನುತ್ತಾರೆ. ಅಸಲು ದಾವಾ ಸಂ. **74/2018** ಮತ್ತು ಅಸಲು ದಾವಾ ಸಂ. **47/2016** ರಲ್ಲಿ ವೀರಭದ್ರರಾಧ್ಯ ಪಕ್ಷಗಾರರಾಗಿ ಇರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವೀರಬದ್ರರಾಧ್ಯ ರವರು **2022** ರಲ್ಲಿ ತೀರಿಕೊಂಡಿರುತ್ತಾರೆ ಅವರ ಸಮಾಧಿ ದಾವಾ ಆಸ್ತಿಯಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಇಂದಿನವರೆಗೂ ವಾದಿಯೇ ಸ್ವಾಧಿನದಲ್ಲಿ ಇರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ಸ.ನಂ. **1/2** ರಲ್ಲಿ ವಾದಿಯ ಹಿರಿಯ ಕುಟುಬಂದವರ ಸಮಾಧಿ ಇರುತ್ತದೆ ಎಂದರೆ ಗೊತಿಲ್ಲ. ಸದರಿ ವೀರಭದ್ರರಾಧ್ಯ ತೀರಿಕೊಂಡಾಗ ನೀವು ಅಲ್ಲಿ ಇರಲಿಲ್ಲ ಆದ್ದರಿಂದ ನೀವು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ **1** ಮತ್ತು ವಾದಿಗಳಿಗೂ ಸಂಬಂದ ಇಲ್ಲ ಎಂದರೆ ಸಂಬಂಧ ಇಲ್ಲ ಎನ್ನುತ್ತಾರೆ. ನಿಡಿ **2** ಮತ್ತು ಪ್ರಸುತ್ತ ದಾವೆಯ ದಾವೆ ಆಸ್ತಿಗೆ ಸಂಬಂಧ ಇಲ್ಲ ಎಂದರೆ ಸ.ನಂ **1/2** ಕ್ಕೆ ಸಂಬಂಧ ಇಲ್ಲ ಎನ್ನುತ್ತಾರೆ. ನಿಡಿ **3** ರಿಂದ **7** ದಾಖಲಾತಿಗಳೂ ಹಾಗೂ ದಾವಾ ಆಸ್ತಿ ಸಂಬಂಧಿಸಿದ್ದಲ್ಲ ಎಂದರೆ ಇಲ್ಲ ಎನ್ನುತ್ತಾರೆ. ಎಲ್ಲಾ ದಾಖಲಾತಿಗಳು ಸ.ನಂ. **1/1** ಕ್ಕೆ ಸಂಬಂಧಿಸಿದ್ದು ಎನ್ನುತ್ತಾರೆ. ನಿಡಿ **8** ಸ.ನಂ.**1/2** ಕ್ಕೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. **1932** ರಲ್ಲಿ ಸ.ನಂ. **3** ಟೌನ್ ಮುನ್ಸಿಪಲ್ ಕಾರ್ಪೋರೇಷನ್ ಚಿಂತಾಮಣಿ ಯವರು ಅಕ್ವೇರ್ ಮಾಡಿಕೊಂಡು ಅದರಲ್ಲಿ ಬಂದ ಹಣದಲ್ಲಿ ದಾನಪ್ಪರಧ್ಯ ಬಸವರಾಧ್ಯ ರವರು ಸ.ನಂ. **1/2** ಅನ್ನು ಬೆಸ್ತರ ಬಾಲಪ್ಪರವರಿಂದ ಖರೀದಿ ಮಾಡಿರುವಂತಹ ಆಸ್ತಿ ಎಂದರೆ ಗೊತ್ತಿಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.